

ಎಡದಿಂದ ಬಲಕ್ಕೆ:

1. ನಿದ್ರೆಯನ್ನು ದೂರ ಇಟ್ಟು ದುಡಿಯಬೇಕೆಂದು ತೀರ್ಮಾನ 3
3. ಗೊಲ್ಲರ ಮನೆಯಲ್ಲಿ ಯಾರೀ ದಾಸಿ? 3
4. ಮಾಧವನ ಮನೆಯಲ್ಲಿ ಎಲ್ಲವೂ ಸಿಹಿಯೋ ಸಿಹಿ 3
6. ಬಾಡಿಗೆ ಮನೆ ಹುಡುಕುವಲ್ಲಿ ಏಕಿಂಥ ಅವಸರ? 4
7. ವಾರಿಜ ನಾಭನ ಪೂಜೆ ನಡೆದದ್ದು ವರ್ಷಾರಂಭದ ಮಾಸ 4
9. ಜ್ವರವೆಲ್ಲ ಹೋಯಿತು ಎಂಬುದು ಸಾಕ್ಷ್ಯ ಸಹಿತವಾಯಿತು 4
11. ಗಾಂಪರ ಹಿಂದೆ ಪದ್ಯಕಾರರ ಸಮೂಹ! 4
15. ಹಣ್ಣು ಹಣ್ಣು ಮುದುಕನದರೂ ಎಂಥ ದರ್ಪ ನೋಡಿ! 3
16. ಈ ಅದ್ಭುತ 'ಮೆಷೀನ್' ಅನ್ನು ರೂಪಿಸಿದ್ದು ಒಬ್ಬಳು ಮಹಿಳೆ 3
17. ಮಾಸಾಶನ ಸಿಕ್ಕ ನಂತರವಷ್ಟೇ ಸಮಸ್ಯೆ ಪರಿಹಾರವಾಯಿತು 3

ಮೇಲಿಂದ ಕೆಳಕ್ಕೆ:

1. ಕಷ್ಟ ಶಮನಕ್ಕೆ ತಾಸಿನ ಒಂದೇ ಅಲ್ಪಾಂಶ 3
2. ರಣದಲ್ಲಿ ಎಲ್ಲರನ್ನೂ ಮಣಿಸಿ ಬಂದವನೇ ಆಕೆಯ ಗಂಡ 3
3. ಆತನ ಬಲಗಿವಿಯ ಮೇಲೆ ಪ್ರಸಿದ್ಧ 'ಪ್ರೇಮ ಕುಸುಮ' 3
5. ಟಾರನ್ನು ಕರಗಿಸುವ ಯಂತ್ರದ್ದು ಇದೆಂಥ ವಿಚಿತ್ರ ಸದ್ದು! 3
6. ಗೆದ್ದವರನ್ನು ಅಪಮಾನಿಸಬಂದವರನ್ನು ಹೆದರಿಸು, ಬೈಯಿ 3
8. ಕರ್ಪೂರದ ಗೊಂಬೆಯಂಥ ಕುದುರೆಯನ್ನು ಏರಲು ಮೆಟ್ಟಿಲು 3
10. ವಿರೋಧಿಸುವವರನ್ನೆಲ್ಲ ನುಂಗಿ ಹಾಕಿತು ನೋಡಿ, ಕಡಲು 3
12. ದೇಶ ವಿದೇಶಗಳಲ್ಲೆಲ್ಲ ಸುಪ್ರಸಿದ್ಧಳಾಗಿರುವ ವಿದ್ವಾಂಸೆ 3
13. ಅಶೋಕನ ದುಷ್ಟ ಚಟುವಟಿಕೆಗಳಿಗೆ ಹಿಡಿತ ಬಂದಿದೆ 3
14. ಎಲ್ಲರಿಗೂ ಹಂಚಿದ್ದು ಮೊಸರನ್ನ; ಅದರಲ್ಲಿ ಕಿಂಚಿತ್ತೂ ಹೆಚ್ಚುಕಡಿಮೆ ಇಲ್ಲ. 3

## 11–03–2021 ಉತ್ತರಗಳು

ಎಡದಿಂದ ಬಲಕ್ಕೆ:

1. ಉಪಕಾರ 3. ಬೇಸರ 4. ಗಳಿಕೆ 6. ಅನುದಿನ 8. ಆಕರ್ಷಕ 10. ನಗೆಗಾರ 12. ಶರಾವತಿ 16. ಲವಣ 17. ನಿಲಯ 18. ಸರೋರುಹ

ಮೇಲಿಂದ ಕೆಳಕ್ಕೆ:

1. ಉರಗ 2. ರಗಳೆ 3. ಬೇಗುದಿ 5. ಕೆಡುಕ6. ಅಭ್ಯಂಜನ 7. ನಭಶ್ಚರ 8. ಆಶಾಪಾಶ 9. ಕರಾಮತಿ11. ಗಾವಿಲ 13. ರಾಧೇಯ (=ಕರ್ಣ ) 14. ಬಾಣಸ 15. ಸನಿಹ



# ಸೀಲ್: ಅದೆಂಥ ಪ್ರಾಣಿ?

ಸೀಲ್. ಅದು ಸ್ತನಿ ವರ್ಗಕ್ಕೆ (ಸಸ್ತನಿ ಅಲ್ಲ) ಸೇರಿದ ಒಂದು 'ಸಾಗರ ಪ್ರಾಣಿ'. ಸೀಲ್ ಗಳಲ್ಲಿ 32 ಪ್ರಭೇದಗಳಿವೆ. ಅವುಗಳದು ಒಂದು ಬಗೆಯ ದಷ್ಟ ಪುಷ್ಟ ವಿಚಿತ್ರ ರೂಪದ ಶರೀರ (ಚಿತ್ರಗಳಲ್ಲಿ ಗಮನಿಸಿ). ಕತ್ತಿನಿಂದ ಮುಂದಕ್ಕೆ ಸಿಲಿಂಡರಿನಂತೆ ದುಂಡಾಗಿ ಹಿಂತುದಿಯ ಕಡೆಗೆ ಕ್ರಮೇಣ ಕಿರಿದಾದ ದೇಹ; ಕೈ ಕಾಲುಗಳ ಮುಖ್ಯ ಭಾಗವೆಲ್ಲ ಶರೀರದೊಳಗೇ ಹುದುಗಿ, ಉದ್ದನ್ನ ಪಾದಗಳು ಮತ್ತು ಹಸ್ತಗಳು ಮಾತ್ರ ದೇಹದಿಂದ ಹೊರಗಿದ್ದು, ಬೆರಳುಗಳು 'ಈಜು ರೆಕ್ಕೆ'ಗಳಂತಾಗಿರುವ ವಿನ್ಯಾಸ. ಹೀಗೆ ಜಾಲ ಪಾದ ಮತ್ತು ಜಾಲ ಹಸ್ತ ಸಹಿತ ಪ್ರಾಣಿಗಳಾದ್ದರಿಂದ ಸೀಲ್ಗಳಿಗೆ ನೆಲದ ಮೇಲೆ ನಡೆದಾಟ ತುಂಬ ತ್ರಾಸದಾಯಕ ; ಆದರೆ ಕಡಲಲ್ಲಿ ಲೀಲಾಜಾಲವಾಗಿ ಈಜಾಡಬಲ್ಲ ಸಾಮರ್ಥ್ಯ. ಇನ್ನೂ ವಿಶೇಷ ಏನೆಂದರೆ, ಈ ಪ್ರಾಣಿಗಳು ಕಡಲಲ್ಲಿ 1,000 ಅಡಿ ಆಳದವರೆಗೂ ಮುಳುಗಬಲ್ಲವು ; ಒಮ್ಮೆಮುಳುಗಿದರೆ ಮುವ್ವತ್ತು ನಿಮಿಷಗಳ ಕಾಲ ಉಸಿರು ಹಿಡಿದಿರಬಲ್ಲವು!

ಸೀಲ್ ಗಳು ಧರೆಯ ಎಲ್ಲ ಕಡಲುಗಳಲ್ಲೂ ಇವೆಯಾದರೂ ಆರ್ಕ್ಟಿಕ್ ಮತ್ತು ಅಂಟಾರ್ಕ್ಟಿಕಾ ಶೀತಲೋಕಗಳ ಕಡಲುಗಳಲ್ಲಿ ಅವುಗಳ ಪ್ರಧಾನ ವಾಸ್ತವ್ಯ. ವಿಶೇಷವಾಗಿ ಸಂತಾನ ಅಭಿವೃದ್ಧಿಯ ಕಾಲಗಳಲ್ಲಿ ಕೆಲವಾರು ದ್ವೀಪಗಳ ಕಡಲಂಚುಗಳಲ್ಲಿ ಅವುಗಳ ಭಾರೀ ಹಿಂಡುಗಳು ಸರ್ವೇ ಸಾಮಾನ್ಯ.

ಸೀಲ್ ಗಳು ಬೇಟೆಗಾರ ಪ್ರಾಣಿಗಳು ಮತ್ತು ಶುದ್ಧ ಮಾಂಸಾಹಾರಿಗಳು. ಮತ್ಸ್ಯಗಳು, ಮೃದ್ವಂಗಿಗಳು ಮತ್ತಿತರ ಚಿಪ್ಪಿನ ಪ್ರಾಣಿಗಳು (ಕ್ರಸ್ಟೇಷಿಯನ್ಸ್) ಅವುಗಳ ಪ್ರಧಾನ ಆಹಾರ.ಅಂಟಾರ್ಕ್ಟಿಕಾದ 'ಚಿರತೆ ಸೀಲ್'ಗಳು ಮಾತ್ರ (ಚಿತ್ರ 2) ಪೆಂಗ್ವಿನ್ ಗಳನ್ನೂ, ಇತರ ಕಡಲ ಹಕ್ಕಿಗಳನ್ನೂ, ಚಿಕ್ಕ ಸೀಲ್ ಗಳನ್ನೂ ಬೇಟೆಯಾಡುತ್ತವೆ. ಆದರೆ, ಧ್ರುವ ಕರಡಿ, ಭಾರೀ ಶಾರ್ಕ್ ಗಳು ಮತ್ತು ಹಲ್ಲಿನ ತಿಮಿಂಗಿಲಗಳಿಗೆ ಸೀಲ್ ಗಳೇ ಬಲಿ ಪ್ರಾಣಿಗಳಾಗಿವೆ. ಸೀಲ್ ಗಳದು ಪ್ರಭೇದದಿಂದ ಪ್ರಭೇದಕ್ಕೆ ವಿಭಿನ್ನ ಗಾತ್ರ, ತೂಕ. ಅತ್ಯಂತ ಪುಟ್ಟ




ಪ್ರಭೇದ 'ಬೈಕಲ್ ಸೀಲ್' ಮೂರೂವರೆ ಅಡಿ ಉದ್ದ ಮತ್ತು 80 ಕಿಲೋ ತೂಕ ಮುಟ್ಟುತ್ತದೆ. ಅತ್ಯಂತ ದೈತ್ಯ ಪ್ರಭೇದವಾದ 'ಎಲಿಫೆಂಟ್ ಸೀಲ್' ನ ಶರೀರ 21 ಅಡಿ ಉದ್ದ ಇದ್ದು 3,700 ಕಿಲೋ ತೂಗುತ್ತದೆ.

ಸೀಲ್‌ಗಳನ್ನು ಬೇಟೆಯಾಡುವ ಪ್ರಾಣಿಗಳು ಹಲವಾರು ಇದ್ದರೂ ಮನುಷ್ಯರೇ ಸೀಲ್ಗಳ ಪ್ರಧಾನ ಶತ್ರು. ಮಾಂಸಕ್ಕಾಗಿ, ಚರ್ಮಕ್ಕಾಗಿ, ಚರ್ಮದ ಕೆಳಗಿನ ಕೊಬ್ಬಿಗಾಗಿ ಕಳೆದ ಶತಮಾನಗಳಲ್ಲಿ ಪ್ರತಿ ವರ್ಷ ಲಕ್ಷಾಂತರ ಸಂಖ್ಯೆಯಲ್ಲಿ ಅವುಗಳ ಕಗ್ಗೊಲೆ ನಡೆದು ಬಹುಪಾಲು ಪ್ರಭೇದಗಳು ಅಲ್ಪ ಸಂಖ್ಯೆ ತಲುಪಿವೆ. ಪ್ರಸ್ತುತ ಜಗದಾದ್ಯಂತ ಸೀಲ್ ಗಳ ಬೇಟೆಯನ್ನು ನಿಷೇಧಿಸಲಾಗಿದೆ. ಹಾಗಾಗಿ ಕೆಲವು ಪ್ರಭೇದಗಳು ಚೇತರಿಸಿಕೊಳ್ಳುತ್ತಿವೆ.

■ ಎನ್. ವಾಸುದೇವ್